	New it is in backward taluks	163.94	163.94
	New it is in 10 taluks	500.00	500.00
	Moddur Training	500.00	500.00
	Total -Labour	**1330.58**	**1327.58**
17	**Social Welfare**		
	SCP- Pooled Fund	10730.00	6492.54
	TSP-Pooled Fund		2654.80
	Total-Social Welfare	**10730.00**	**9147.34**
18	**Women & Child Dey**		
	Anganwadi Bidgs	3000.00	47.56
	Grand Total	**254733.96**	**173941.38**

453 ಶ್ರೀ ಸಂಪಂಗಿ. ಎನ್ (ಬಾಗೇಪಲ್ಲಿ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಶುದ್ಧೀಕರಣಗೊಳಿಸದ ನೀರನ್ನು ಪೂರೈಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮವೇನು?

ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು :

ಅ) ಬಾಗೇಪಲ್ಲಿ ಪುರಸಭೆವ್ಯಾಪ್ತಿಯಲ್ಲಿ ಶುದ್ಧೀಕರಿಸಿದ ನೀರನ್ನು ಪೂರೈಸಲಾಗುತ್ತದೆ.

ಆ) ಶುದ್ಧೀಕರಣ ಘಟಕದಲ್ಲಿ ನೀರನ್ನು ಶುದ್ಧೀಕರಿಸಿ ಪಟ್ಟಣದಲ್ಲಿ ಸರಬರಾಜು ಮಾಡಲಾಗುತ್ತಿದೆ, ಹಾಗೂ ಶುದ್ಧೀಕರಣದ ಪ್ರಮಾಣ ಹೆಚ್ಚಿಸಿ ಇನ್ನೂ ಹೆಚ್ಚು ನೀರನ್ನು ಶುದ್ಧೀಕರಿಸಲು ಮೈಸೂರಿನಿಂದ ಶುದ್ಧೀಕರಣದ ಹೊಸ ಮರಳನ್ನು ಖರೀದಿಸಿ ಪ್ರಸ್ತುತ ಇರುವ ಮರಳಿನ ಪದರವನ್ನು ಬದಲಾಯಿಸಲಾಗಿದೆ.

916 ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ಪುರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಬಿಟ್ಟಿರುವ ಜಾಗಗಳನ್ನು ಪುರಸಭೆಯ ಸದಸ್ಯರುಗಳು ಮತ್ತು ಅಧಿಕಾರಿ

ವರ್ಗದವರು ಶ್ರೀಮಂತ ವ್ಯಕ್ತಿಗಳಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈಗಾಗಲೇ ಒಬ್ಬ ನೌಕರರನ್ನು ಅಮಾನತ್ತಿನಲ್ಲಿಡಲಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ; ಉಳಿದಂತೆ ಇತರೆ ಅಧಿಕಾರಿಗಳಿಗೆ ಯಾವಾಗ ಶಿಕ್ಷೆ ನೀಡಲಾಗುವುದು;

ಇ) ಸಾರ್ವಜನಿಕ ಉದ್ದೇಶಗಳ ಜಾಗವನ್ನು ಸಾರ್ವಜನಿಕರಿಗೆ ಉಪಯುಕ್ತವಾಗುವಂತೆ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ. ಬಾಲಚಂದ್ರ ಲ. ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು) :

ಅ) ಕಡೂರು ಪುರಸಭಾ ವ್ಯಾಪ್ತಿಯಲ್ಲಿ ಶವ ಸಂಸ್ಕಾರಕ್ಕಾಗಿ ಮೀಸಲಿಟ್ಟ ಜಾಗವನ್ನು ಕಡೂರು ಪುರಸಭೆಯ ಹಿಂದಿನ ಕಂದಾಯ ನಿರ್ಧರಣಾಧಿಕಾರಿಯು ಅನಧಿಕೃತವಾಗಿ ಖಾತೆ ಮಾಡಿರುವ್ರದು ಗಮನಕ್ಕೆ ಬಂದಿದೆ.

ಆ) ಶವಸಂಸ್ಕಾರಕ್ಕಾಗಿ ಮೀಸಲಿಟ್ಟ ಜಾಗವನ್ನು ಅನಧಿಕೃತವಾಗಿ ಖಾತೆ ಮಾಡಿದ ಸಂಬಂಧ ಹಿಂದಿನ ಕಂದಾಯ ನಿರ್ಧರಣಾಧಿಕಾರಿ ಶ್ರೀ ಕೆ.ಎಂ.ಸತ್ಯನಾರಾಯಣ ಇವರ ವಿರುದ್ಧದ ಆಪಾದನೆಗಳ ಕುರಿತು ಪರಿಶೀಲಿಸಿ ನಿಯಮಾನುಸಾರ ಶಿಸ್ತು ಕ್ರಮವಹಿಸಲಾಗುತ್ತದೆ. ಮತ್ತು ಬೇರೊಂದು ಪ್ರಕರಣವಾದ 2002ರಿಂದ 2007ನೇ ಸಾಲಿನ ಅವಧಿಯಲ್ಲಿ ಅಭಿವೃದ್ಧಿ ಶುಲ್ಕ ಪಾವತಿಸಿ ಕೊಳ್ಳದೆ ಖಾತೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ಟಿ.ಎಂ. ಗಂಗಾಧರಪ್ಪ, ಪ್ರಥಮ ದರ್ಜೆ ಸಹಾಯಕರು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

ಇ) 1964ರ ಕರ್ನಾಟಕ ಪುರಸಭೆಗಳ ಕಾಯ್ದೆ ಸೆಕ್ಷನ್ 87 (ಎಫ್) ರಲ್ಲಿ ಸಾರ್ವಜನಿಕ ಸ್ವತ್ತುಗಳು/ಜಾಗಗಳು ಮುನಿಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಿರಲಿ ಅಥವಾ ಸರ್ಕಾರಕ್ಕೆ ಸೇರಿರಲಿ ಅವುಗಳಲ್ಲಿನ ಅಡಚಣೆಗಳನ್ನು ತೆಗೆದುಹಾಕಲು ಮತ್ತು 91 ಬಿ ರಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಮಂಡಳಿಯು ಸಾರ್ವಜನಿಕ ಉದ್ಯಾನವನ ಸ್ಥಾಪನೆ ಮತ್ತು ನಿರ್ವಹಣೆ ಮಾಡಲು ಅಧಿಕಾರ ಹೊಂದಿರುತ್ತದೆ.

637 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಲೋಕೋಪಯೋಗಿ ವಿಭಾಗದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದ ನೆರವಿನ ಸಿಆರ್‌ಎಫ್ ಮತ್ತು ಇತರೆ ಕೇಂದ್ರದ ನೆರವಿನ ಹಾಗೂ ರಾಜ್ಯ ಸರ್ಕಾರದ ಯಾವ ಯಾವ ಯೋಜನೆಯ